**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 396/2016**

| | | | |
|---|---|---|---|
| **ಹೆಸರು** | **:** | **ಅನುಶಾಬಾಯಿ** | **ಚಾ.ಸಾ. 6** |
| **ಗಂಡನ ಹೆಸರು** | **:** | **ಪ್ರಭು** | **ಪ್ರಾ.ಸಾ. 3** |
| **ವಯಸ್ಸು** | **:** | **40 ವರ್ಷ** | **ದಿನಾಂಕಃ 19-07-2025** |
| **ಉದ್ಯೋಗ** | **:** | **ಕೂಲಿ** | |
| **ವಾಸಸ್ಥಳ** | **:** | **ಪಸ್ತಪೂರ ತಾಂಡಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ಗಂಡ. ಚಾಸಾ-4 ಮತ್ತು 5 ರವರು ನಮ್ಮ ತಾಂಡದವರು. ಆರೋಪಿತರು ನನಗೆ ಗೊತ್ತು.

ಈಗ್ಗೆ 10 ವರ್ಷಗಳ ಹಿಂದೆ ನಾನು ಬಾವಿಗೆ ನೀರು ತರಲು ಹೋದಾಗ 3 ಮತ್ತು 4 ನೇ ಆರೋಪಿತರು ಸೇರಿ ನನಗೆ ಮತ್ತು ಚಾಸಾ-5 ರವರಿಗೆ ಹೊಡೆದಿರುತ್ತಾರೆ. ಈ ರೀತಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರು ಮತ್ತು ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 13-04-2016 ರಂದು ಸಾಯಂಕಾಲ 05-00 ಗಂಟೆ ಸುಮಾರಿಗೆ ನಾನು ತಾಂಡದಲ್ಲಿರು ಸೇವಾ ಲಾಲ ಗುಡಿಯ ಹತ್ತಿರ ಇರುವ ಬಾವಿಗೆ ನೀರು ತರಲು ಹೋದಾಗ ಆರೋಪಿತರೆಲ್ಲರು ಸೇರಿಕೊಂಡು ನನಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನ ಜೊತೆ ಜಗಳಕ್ಕೆ ಬಿದ್ದು ಕಣ್ಣಿಗೆ ಖಾರದ ಪುಡಿ ಹಾಕಿ, ಬಾಯಿಯಲ್ಲಿ ಬಟ್ಟೆ ಹಾಕಿ, ಕಟ್ಟಿಗೆ ಹಾಗೂ ಕಲ್ಲಿನಿಂದ ನನ್ನ ತಲೆಗೆ ಮತ್ತು ಬೆನ್ನಿಗೆ ಹೊಡೆದಿರುತ್ತಾರೆಂದರೆ ಸರಿ. ನಂತರ 1ನೇ ಆರೋಪಿ ನನಗೆ ತಡೆದು ನಿಲ್ಲಿಸಿ ಕಟ್ಟಿಗೆ ಹಾಗೂ ಕಲ್ಲುಗಳಿಂದ ನನಗೆ ಹೊಡೆದಿರುತ್ತಾರೆಂದರೆ ಸರಿ. ಆಗ ಚಾಸಾ-4 ಮತ್ತು 5 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆಂದರೆ ಸರಿ. ಅಲ್ಲಿಂದ ಆರೋಪಿತರು ಹೋಗುವ ಸಮಯಕ್ಕೆ ನನಗೆ ಜೀವ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಆ ದಿನ ಆರೋಪಿತರು ನನಗೆ ಹಲ್ಲೆ

ಮಾಡಿದ ವಸ್ತುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ವಿ.ಹೆಚ್.ಆರ್. ವಕೀಲರಿಂದಃ**

ನನ್ನ ಗಂಡನ ವಿರುದ್ಧ ಬಹಳಷ್ಟು ಪ್ರಕರಣಗಳು ದಾಖಲಾಗಿವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನ ವಿರುದ್ಧ ರೌಡಿಶಿಟರ್ ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ.

ಪಸ್ತಪೂರ ತಾಂಡದಲ್ಲಿ ಸರ್ಕಾರದವರು ನೀರಿನ ನಳ ಕೂಡಿಸಿರುತ್ತಾರೆ ಎಂದರೆ ಸರಿ. ನಮ್ಮ ಊರಿನಲ್ಲಿ ಸರ್ಕಾರದವರು ಬೊರವೆಲ್ ಗಳನ್ನು ಹಾಕಿಸಿರುತ್ತಾರೆ ಎಂದರೆ ಸರಿ. ವಿದ್ಯುತ್ ಇದ್ದರೆ ಬೊರವೆಲನ ನೀರು ತೆಗೆದುಕೊಳ್ಳುತ್ತೇನೆ, ವಿದ್ಯುತ್ ಇಲ್ಲದಿದ್ದರೆ ಬಾವಿ ನೀರು ತೆಗೆದುಕೊಳ್ಳುತ್ತೇನೆ. 1ನೇ ಆರೋಪಿ ನಮ್ಮ ಗ್ರಾಮದಲ್ಲಿ ರೋಡ, ಬಾವಿ ಹಾಗೂ ಇತರೆ ಕೆಲಸಗಳನ್ನು ಮಾಡಿಸಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿತರು ಒಳ್ಳೆ ಕೆಲಸ ಮಾಡುತ್ತಿದ್ದಾಗ ಅವರಿಗೆ ಸತಾಯಿಸಲು ನಾನು ಮತ್ತು ನನ್ನ ಗಂಡ ಸುಳ್ಳು ಪ್ರಕರಣಗಳನ್ನು ಆರೋಪಿತರ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಮದ್ಯಪಾನ ಸೇವಿಸಿ ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವ ಕಾರಣ ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲಿಸಿದ್ದು, ಆದ್ದರಿಂದ ನಾವು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಹಲ್ಲೆ ಮಾಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.2 ತರಹದ ಕಲ್ಲು ನಮ್ಮ ಊರಿನಲ್ಲಿ ಬಹಳಷ್ಟು ಸಿಗುತ್ತದೆ ಎಂದರೆ ಸರಿ. ಮು.ಮಾ.-1 ತರಹದ ಬಡಿಗೆ ನಮ್ಮ ಊರಿನಲ್ಲಿ ಬಹಳಷ್ಟು ಸಿಗುತ್ತದೆ ಎಂದರೆ ಸರಿ. ಮು.ಮಾ.1 ಮತ್ತು 2 ನ್ನು ಇದೇ ಮೊದಲನೇ ಬಾರಿಗೆ ನ್ಯಾಯಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಭಾರ ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**